5292 (5149) ಶ್ರೀ ಪಾಪರೆಡ್ಡಿ ಎ. : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರವು ರಚನೆಯಾಗಿ ಒಂದು ವರ್ಷವಾದರೂ (ಆಡಳಿತದಲ್ಲಿ) ಈವರೆಗೂ ಆರಾಧನಾ ಸಮಿತಿ, ಅಕ್ರಮ-ಸಕ್ರಮ ಸಮಿತಿ ಟ್ರಿಬ್ಯೂನಲ್ ಸಮಿತಿಗಳನ್ನು ರಚಿಸದಿರಲು ಕಾರಣಗಳೇನು:

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳುವ ಕ್ರಮವೇನು?

ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) (1) ಆರಾಧನಾ ಸಮಿತಿ:- ಈಗಾಗಲೇ 20 ಕ್ಷೇತ್ರಗಳಿಗೆ ಆರಾಧನಾ ಸಮಿತಿ ರಚಿಸಲಾಗಿದ್ದು, ಇನ್ನುಳಿದ ಕ್ಷೇತ್ರಗಳಿಗೂ ಶೀಘ್ರದಲ್ಲಿ ಸಮಿತಿ ರಚಿಸಲಾಗುವುದು.

(2) ಅಕ್ರಮ ಸಕ್ರಮ ಸಮಿತಿ:- ಅಕ್ರಮ ಸಕ್ರಮ ಸಮಿತಿಗಳ ನೇಮಕಾತಿಗಳಿಗೆ ಹೊಸ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಜಿಲ್ಲಾಧಿಕಾರಿಗಳಿಂದ ಹೊಸ ಪ್ರಸ್ತಾವನೆಗಳು ಸರ್ಕಾರಕ್ಕೆ ಬರುತ್ತಿದ್ದು, ಅವುಗಳು ಸರ್ಕಾರದ ತೀವ್ರ ಪರಿಶೀಲನೆಯಲ್ಲಿವೆ. ಈಗಾಗಲೇ 10 ಸಮಿತಿ ರಚಿಸಲಾಗಿದ್ದು, ಆದಷ್ಟೂ ಬೇಗನೆ ಉಳಿದ ಸಮಿತಿಗಳನ್ನು ರಚಿಸಲಾಗುವುದು.

(3) ಭೂನ್ಯಾಯ ಮಂಡಳಿ:- ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಭೂನ್ಯಾಯ ಮಂಡಳಿಗಳನ್ನು ಈಗಾಗಲೇ ರಚನೆ ಮಾಡಲಾಗಿದ್ದು, ಅವು ಅಸ್ತಿತ್ವದಲ್ಲಿದ್ದು, ಕಾರ್ಯನಿರ್ವಹಿಸುತ್ತಿವೆ.

ಆ) ಉದ್ಭವಿಸುವುದಿಲ್ಲ.

5293 (6158) ಶ್ರೀ ಪಾಟೀಲ್ ಡಿ. ಆರ್. (ಗದಗ) : ಮಾನ್ಯ ಉಪ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವ್ಯಾಟ್ ಅನುಷ್ಠಾನಗೊಳ್ಳುತ್ತಿರುವ ನಮ್ಮ ರಾಜ್ಯದಲ್ಲಿ ಮೊದಲ 3 ತಿಂಗಳ ಅವಧಿಯಲ್ಲಿ (ಏಪ್ರಿಲ್ 1 ರಿಂದ ಜೂನ್ 30) ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಆದ ಹೆಚ್ಚಳ, ಇಲ್ಲವೇ ಕೊರತೆ ಎಷ್ಟು;

ಆ) ಇದು ಇಲಾಖೆ ನಿರೀಕ್ಷಿಸಿದ ಮಟ್ಟದಲ್ಲಿದೆಯೇ;

ಇ) ಇಲಾಖೆ ಈ ವರ್ಷದಲ್ಲಿ ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಕಡಿತ ನಿರೀಕ್ಷಿಸುವುದೇ;

ಈ) ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು)

ಅ) 2005, ಏಪ್ರಿಲ್ 1 ರಿಂದ ಜೂನ್ 30 ರವರೆಗಿನ ಅವಧಿಯಲ್ಲಿ ವಾಣಿಜ್ಯ ತೆರಿಗೆಗಳ ಒಟ್ಟು ಸಂಗ್ರಹಣೆಯಲ್ಲಿ ಕಳೆದ ವರ್ಷದ ಇದೇ ಅವಧಿಯಲ್ಲಿ ಆದ ಸಂಗ್ರಹಣೆಗಿಂತ ರೂ.597.66 ಕೋಟಿಗಳಷ್ಟು ಹೆಚ್ಚಿನ ಸಂಗ್ರಹಣೆ ಆಗಿರುತ್ತದೆ.

ಆ) ಹೌದು.